INDIAN JOURNAL OF HISTORY AND ARCHAEOLOGY

ISSN (e):2582-225X
Vol-3, Issue -1, May-June, 2021, Page No,87-95
Peer Reviewed Journal, Referred Journal

# ಮಹಾತ್ಮ ಗಾಂಧೀಜಿ ಅವರ ಚಿಂತನೆಯಲ್ಲಿ ಸರ್ವೋದಯದ ಸಿದ್ಧಾಂತ

ಡಾ.ಎಸ್. ಶಿವಶಂಕರ.[1]

ನಮ್ಮ ಭಾರತ ದೇಶದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಮಹಾನ್ ಆಧ್ಯಾತ್ಮಿಕ ಜೀವಿ, ಅಪ್ರತಿಮ ಮುತ್ಸದ್ಧಿ, ಮಹಾಮಾನವತಾವಾದಿ, ಮಾನವ ಕುಲದ ಸಮಷ್ಠಿ ಕಲ್ಯಾಣಕ್ಕಾಗಿ ಅವಿರತವಾಗಿ ದುಡಿದು ಪೂರ್ಣ ತಮ್ಮನ್ನು ಸಮಾಜಕಾರ್ಯಕ್ಕಾಗಿಯೇ ಸಮರ್ಪಿಸಿಕೊಂಡವರು, ಭಾರತೀಯರ ಅಪ್ರತಿಮ ಅನುಪಮ ನಂದಾದೀಪ, ಗುಲಾಮಗಿರಿಯನ್ನು ನಿರ್ಮೂಲನೆ ಮಾಡಿದ ವಿಶ್ವಜ್ಯೋತಿ. ಮಹಾತ್ಮರದು ಅಪೂರ್ವ ಅಂತದೃಷ್ಟಿ, ಸ್ವ-ಅನುಭವಿ, ಜಾತ್ಯಾತೀತ, ಸಮಾಜವಾದಿ, ಸಮಾಜದ ಸರ್ವಾಂಗೀಣ ಸಾಮರಸ್ಯ, ಸಹಬಾಳ್ವೆಗಾಗಿ, ನವಸಮಾಜ ನಿರ್ಮಾಣಕ್ಕಾಗಿ ನಿಸ್ವಾರ್ಥತೆಯಿಂದ ನಿರಂತರವಾಗಿ ದುಡಿದವರು. ಸರ್ವಧರ್ಮ ಸಮನ್ವಯ ದೃಷ್ಟಿಯುಳ್ಳವರು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅಚಲ ವಿಶ್ವಾಸವಿಟ್ಟವರು. ಸರ್ವಕ್ಷೇತ್ರಗಳಲ್ಲೂ ಸರ್ವೋದಯ ಸಿದ್ಧಾಂತದ ಮಹತ್ವತೆಯನ್ನು ಪ್ರತಿಪಾದಿಸಿ ಅನುಷ್ಠಾನಕ್ಕೆ ತಂದವರು. ಸರ್ವೋದಯದ ಧರ್ಮದರ್ಶಿತ್ವ, ದೂರದರ್ಶಿತ್ವವುಳ್ಳವರು. ಮಾನವ ಜನಾಂಗದ ಕಣ್ಣು ತೆರೆಸಿದ ದಿವ್ಯದಾರ್ಶನಿಕ. ಅಖಂಡ ಭಾರತದ ಸಮಗ್ರ ಸುಧಾರಕರು, ಭಾರತೀಯ ದಾಸ್ಯ ವಿಮೋಚನೆಯ ಕಾರಣ ಪುರುಷರು, ಆಧುನಿಕ ಭವ್ಯಭಾರತದ ನಿರ್ಮಾಪಕರಲ್ಲಿ ಅಗ್ರಗಣ್ಯರು. ಮಹಾತ್ಮರು ಭವ್ಯಭಾರತದ ಸರ್ವೋದಯ ಸಾಮಾಜಿಕ ಚಿಂತನೆ ಇವರ ಪ್ರಮುಖ ಉದ್ದೇಶವಾಗಿತ್ತು.

ಸರ್ವೋದಯವನ್ನು ಭಾರತೀಯ ವಿಶಿಷ್ಟವಾದ ಸಾಮಾಜಿಕ ದರ್ಶನವೆಂದು ಕರೆಯಬಹುದು. ಸರ್ವೋದಯದ ಮೂಲ ಸುಮಾರು 2000 ಸಾವಿರ ವರ್ಷಗಳ ಹಿಂದೆಯೇ ಅಸ್ತಿತ್ವದಲ್ಲಿತ್ತು. ಅಂದರೆ ವೇದಾಂತದ ಋಷಿಮುನಿಗಳು, ಬುದ್ಧ, ಮಹಾವೀರಇನ್ನೂ ಅನೇಕ ಸಾಧು ಸಂತರು ಪ್ರತಿಪಾದಿಸಿದ ದರ್ಶನ ಸರ್ವೋದಯ. ಸರ್ವೋದಯ ದರ್ಶನವು ಅತಿ ಪುರಾತನವಾದುದಾದರೂ ಅದಕ್ಕೆ ಪುನರುಜ್ಜೀವವನ್ನುಕೊಟ್ಟವರು. ಮಹಾತ್ಮ ಗಾಂಧೀಜಿ ಅವರು ಅಂದರೆ ಹಿಂದೆ ಇರುವ ಆದರ್ಶ ಸಮಾಜದ ಕಲ್ಪನೆಯನ್ನು ಅವರು ಸೃಷ್ಟಿಸಿದರು. ಅದನ್ನು ಕಾರ್ಯರೂಪಕ್ಕೆ ತರಲು ತಮ್ಮ ಇಡೀ ಜೀವನವನ್ನು ಮುಡುಪಾಗಿಟ್ಟರು. ಸರ್ವೋದಯ ಎಂಬ ಪದ ಹೇಗೆ ಉದಯಿಸಿತು ಎಂಬುದರ ಬಗ್ಗೆ ಅವರೇ ತಮ್ಮ ಆತ್ಮಕಥೆಯಲ್ಲಿ ವಿವರಿಸಿದ್ದಾರೆ. ಅವರು ಓದಿದ ಅನೇಕ ಗ್ರಂಥಗಳಲ್ಲಿ ಅವರ ಜೀವನದಲ್ಲಿ

1. ಅತಿಥಿ ಉಪನ್ಯಾಸಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.

ಪರಿಣಾಮಕಾರಿಯಾದ ಪರಿವರ್ತನೆಯನ್ನುಂಟು ಮಾಡಿದ ಗ್ರಂಥವೆಂದರೆ ಪ್ರಸಿದ್ಧ ಬ್ರಿಟೀಷ್ ಚಿಂತಕನಾದ ಜಾನ್ ರಸ್ಕಿನ್‌ನ "ಉಟಿಣಂ ಖ್ಣು ಐಚಿಷಣ"[1] "ಉಟಿಣಂ ಖ್ಣು ಐಚಿಷಣ" ಎಂಬ ಗ್ರಂಥ ಗಾಂಧೀಜಿ ಅವರ ಕೆಲವು ಭಾವನೆಗಳು ಪ್ರತಿಬಿಂಬಿತವಾಗಿದ್ದವು. ಅವು ಅವರ ಮನಸ್ಸಿನ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ್ದವು. ಆ ಗ್ರಂಥದಲ್ಲಿದ್ದ ಉಪದೇಶಗಳಲ್ಲಿ ಪ್ರಮುಖವಾಗಿಅವರ ಮನಸ್ಸಿಗೆ ನಾಟಿದ ಅಂಶಗಳೆಂದರೆ;

1. ವ್ಯಕ್ತಿಯ ಹಿತಕ್ಕೂ ಸಮಾಜದ ಹಿತಕ್ಕೂ ಯಾವುಧಕ್ಕೆಯೂ ಇಲ್ಲ. ವ್ಯಕ್ತಿಯ ಹಿತ ಸಮಾಜದ ಹಿತದಲ್ಲಿ ಅಡಗಿದೆ.
2. ಕಾಯಕದಲ್ಲಿ ಮೇಲು-ಕೀಳು ಎಂಬುದಿಲ್ಲ. ಒಬ್ಬ ವಕೀಲನ ಕೆಲಸಕ್ಕೆ ಒಬ್ಬ ನ್ಯಾಯಿಂದನ ಕೆಲಸದಷ್ಟೇ ಬೆಲೆಯಿದೆ. ಏಕೆಂದರೆ, ತಮ್ಮತಮ್ಮ ಕಾಯಕಗಳಿಂದ ತಮ್ಮತಮ್ಮ ಹೊಟ್ಟೆ ಹೊರೆದುಕೊಳ್ಳುವ ಒಂದೇ ರೀತಿಯ ಹಕ್ಕು ಎಲ್ಲರಿಗೂಇದೆ.
3. ಬದುಕು ದುಡಿಮೆಯ ಬದುಕಾಗಿರಬೇಕು. ರೈತನ ಮತ್ತು ಕೈ ಕಸುಬುದಾರನ ಬದುಕು ಬದುಕಲು ಯೋಗ್ಯವಾದುದು.

ರಸ್ಕಿನ್‌ನ ಈ ಚಿಕ್ಕ ಗ್ರಂಥದಿಂದ ಪ್ರಭಾವಿತರಾದ ಗಾಂಧೀಜಿ ಅವರು ತಕ್ಷಣವೇ ಅದನ್ನು ತಮ್ಮ ಮಾತೃಭಾಷೆಯಾದ ಗುಜರಾತಿಗೆ ಅನುವಾದಿಸಿ ಸರ್ವೋದಯಎಂದು ನಾಮಕರಣ ಮಾಡಿದರು.

**ಸರ್ವೋದಯದ ಅರ್ಥ**

ಸರ್ವೋದಯವೆಂದರೆ, ಅದರ ಪದವೇ ಹೇಳುವಂತೆ ಸರ್ವರ ಸರ್ವ ವಿಧದ ಸಮಾಜದ ಸರ್ವಸ್ತರಗಳ ಉದಯ ಮತ್ತು ಅಭ್ಯುದಯ. ಸರ್ವರ ಉದಯದ ದಿವ್ಯ ಸಂದೇಶ "ಸರ್ವೇಜನಾ ಸುಖಿನೋ ಭವತು"[2]. ಸರ್ವರಿಗೂ ಕಲ್ಯಾಣವಾಗಲಿ, ಸರ್ವರೂ ಸುಖವಾಗಿರಲಿ ಎಂಬ ಋಷಿವಾಣಿಯೇ ಅದರ ಬೀಜಮಂತ್ರ. ವಿಶ್ವಕಲ್ಯಾಣವೇ ಅದರ ಮೊದಲ ಗುರಿ. ಅದು ಅಹಿಂಸೆಯ ವ್ರತವನ್ನಾಗಿ ಸ್ವೀಕರಿಸುತ್ತದೆ. ಸತ್ಯಾಗ್ರಹವೇ ಅದರ ಮೂಲ ಅಸ್ತ್ರ; ಸತ್ಯವೇ ಅದರ ಗುರಿ. ಪ್ರಪಂಚದ ಸರ್ವಧರ್ಮಗಳ ಉಪದೇಶ ಸಾರವನ್ನು ಸ್ವೀಕರಿಸಿ ಸಮನ್ವಯ ಮಾಡಿ, ಮಾನವಧರ್ಮವನ್ನು ಅದು ಪ್ರತಿಷ್ಠಾಪಿಸುತ್ತದೆ. ಅದಕ್ಕೆ ಆಧ್ಯಾತ್ಮಿಕ ಮೌಲ್ಯಗಳಲ್ಲಿ ಅಚಲ ಶ್ರದ್ಧೆಯಿದೆ.

ಸರ್ವೋದಯ ಸಮಾಜದ ಆಧಾರ ಸತ್ಯ ಅಹಿಂಸೆ. ಅಹಿಂಸೆ ಮಾನವನ ಸಹಜ ಗುಣವಾದ್ದರಿಂದ ಆತ ಸ್ವಭಾವತಃ ಸಾತ್ವಿಕ. ಪ್ರತಿಯೊಬ್ಬ ವ್ಯಕ್ತಿಯ ಜೀವನವೂ ಸತ್ಯ, ಶಾಂತಿ ಹಾಗೂ ಅಹಿಂಸೆಗಳನ್ನು ಆಧಾರವಾಗಿ ಹೊಂದಿದ್ದರೆ ಅಂತಹ ವ್ಯಕ್ತಿಗಳ ನಡುವೆ ಶೋಷಣೆಗೆ ಅವಕಾಶ ವಿರುವುದಿಲ್ಲ. ಉತ್ತಮ ಸಮಾಜದ ನಿರ್ಮಾಣವಾಗುತ್ತದೆ. ಸರ್ವೋದಯದ ಬಹುಮುಖ್ಯ ಉದ್ದೇಶ ಮತ್ತು ಗುರಿಯು ಇದೇ ಆಗಿದೆ. ಸರ್ವೋದಯ ಸಮಾಜವನ್ನು ಸೃಷ್ಟಿಸುವಾಗ ಅವಲಂಬಿಸುವ ಮಾರ್ಗಗಳು ಗುರಿಯಷ್ಟೇ ಒಳ್ಳೆಯದಾಗಿರಬೇಕು, ಪರಿಶುದ್ಧವಾಗಿರಬೇಕು. ನಮ್ಮ ಸಾಧನ ಮಾರ್ಗಗಳು ಎಷ್ಟೆಷ್ಟು ಪರಿಶುದ್ಧವಾಗಿ ನಿರ್ಮಲವಾಗಿ ಪವಿತ್ರವಾಗಿರುತ್ತವೆಯೋ ಅಷ್ಟಷ್ಟು ನಾವು ಗುರಿಯಲ್ಲಿ

ಪ್ರಗತಿಯನ್ನು ಹೊಂದುವೆವು ಎಂಬ ವಿಚಾರವನ್ನು ಗಾಂಧೀಜಿ ಅವರು ವ್ಯಕ್ತಪಡಿಸಿದುದೇ ಅಲ್ಲದೆ ಈ ಸಮಾಜ ಗುರಿಯನ್ನು ಮುಟ್ಟಲು ಅವಲಂಬಿಸುವ ಕಾರ್ಯಕ್ರಮವನ್ನು ಹಾಕಿಕೊಟ್ಟಿದ್ದಾರೆ. ಆ ಕಾರ್ಯಕ್ರಮಗಳೆಂದರೆ;

1. ಖಾದಿಯ ಪ್ರಚಾರ
2. ಅಸ್ಪೃಶ್ಯತಾ ನಿವಾರಣೆ
3. ವಿವಿಧ ಧಾರ್ಮಿಕ ಸಂಘಗಳ ಅನುಯಾಯಿಗಳಲ್ಲಿ ಪರಸ್ಪರ ಮೈತ್ರಿ
4. ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ
5. ಮದ್ಯಪಾನ ನಿರೋಧ
6. ಗ್ರಾಮ ನೈರ್ಮಲ್ಯ
7. ಮೂಲ ಶಿಕ್ಷಣ
8. ವಯಸ್ಕರ ಶಿಕ್ಷಣ
9. ಆರ್ಥಿಕ ಸಮಾನತೆ
10. ವ್ಯವಸಾಯದ ಅಭಿವೃದ್ಧಿ
11. ಕಾರ್ಮಿಕರ ಸಂಘಟನೆ
12. ಆದಿವಾಸಿಗಳ ಕಲ್ಯಾಣ
13. ವಿದ್ಯಾರ್ಥಿಗಳ ಸಂಘಟನೆ
14. ಕುಷ್ಠರೋಗದ ಉಪಚಾರ
15. ತೊಂದರೆಗಳಿಗೆ ಒಳಗಾದವರಿಗೆ ಪರಿಹಾರ
16. ಪ್ರಕೃತಿ ಚಿಕಿತ್ಸೆ
17. ರಾಷ್ಟ್ರಭಾಷೆ, ಪ್ರಾಂತೀಯ ಭಾಷೆ ಮತ್ತು ಸಂಪರ್ಕ ಭಾಷೆ
18. ಸ್ತ್ರೀ–ಪುರುಷರಿಗೆ ಸ್ಥಾನಮಾನಗಳ ಮತ್ತು ಹಕ್ಕುಗಳ ಸಮಾನತೆ.

ಮೇಲೆ ನಮೂದಿಸಿರುವ ಕಾರ್ಯಕ್ರಮದಿಂದ ಸರ್ವೋದಯ ಸಮಾಜದ ಸೃಷ್ಟಿ ದೂರದ ಕನಸೆಂದು ಭಾವಿಸಬಾರದು. ಇದನ್ನು ಇಂದೇ ಕಾರ್ಯರೂಪಕ್ಕೆ ತರಲು ಸಾಧ್ಯವಿದೆ. ಆದರೆ, ಗಾಂಧೀಜಿ ಅವರು ಕಂಡ ಸರ್ವೋದಯ ಸಮಾಜದ ಕನಸು ನನಸಾಗುವುದರಲ್ಲಿ ಸಂದೇಹವಿಲ್ಲ. ಇವೆಲ್ಲವೂ ಭಾರತದ ಪುನರುಜ್ಜೀವನಕ್ಕೆ ಕೈಗೊಂಡ ಕಾರ್ಯಕ್ರಮಗಳು. ಗಾಂಧೀಜಿ ಅವರು ಬದುಕಿರುವ ತನಕ ಇವುಗಳನ್ನು ಅನುಷ್ಠಾನಕ್ಕೆ ತಂದಿದ್ದರು. ಇವು ಭಾರತಕ್ಕೆ ಮಾತ್ರ ಅನ್ವಯಿಸದೆ ಇಡೀ ಮಾನವ ಸಮಾಜಕ್ಕೆ ಅನ್ವಯಿಸುವಂತಹ ಕಾರ್ಯಕ್ರಮಗಳು. ದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ ಸಮಸ್ಯೆಗಳನ್ನು

ಇದರಿಂದ ಬಗೆಹರಿಸಬಹುದಲ್ಲದೆ ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿದೆ ಎಂಬುದನ್ನು ಸರ್ವೋದಯ ದರ್ಶನದ ಮೂಲಕ ತೋರಿಸಿಕೊಟ್ಟಿದೆ.

**ಸರ್ವೋದಯದ ಸಿದ್ಧಾಂತಗಳು**

1. ಸರ್ವೋದಯದ ರಾಜಕೀಯ ಸಿದ್ಧಾಂತ
2. ಸರ್ವೋದಯದ ಆರ್ಥಿಕ ಸಿದ್ಧಾಂತ
3. ಸರ್ವೋದಯ ಮತ್ತು ಸಮತಾವಾದ
4. ಧರ್ಮದರ್ಶಿತ್ವ ಸಿದ್ಧಾಂತ
5. ಸತ್ಯಾಗ್ರಹ
6. ಸರ್ವೋದಯ ಮತ್ತು ಭೂದಾನ

**1. ಸರ್ವೋದಯದರಾಜಕೀಯ ಸಿದ್ಧಾಂತ**

ಸರ್ವೋದಯದ ತತ್ವದ ಆಧಾರದ ಮೇಲೆ ಸ್ಥಾಪಿತವಾಗಿರುವ ಸಮಾಜದಲ್ಲಿರುವ ರಾಜ್ಯ ಪ್ರಜಾರಾಜ್ಯ ಈ ಸಮಾಜದ ಪ್ರತಿಯೊಬ್ಬ ಪ್ರಜೆಗೂ ಸ್ತ್ರೀ–ಪುರುಷರಿಗೂ ಸಮಾನವಾದ ಹಕ್ಕುಗಳಿವೆ. ಸರ್ಕಾರ ಪ್ರಜೆಗಳ ಸಮ್ಮತಿಯನ್ನು ಪಡೆದು ಕಾರ್ಯನಿರ್ವಹಿಸುವಂತಾದರೆ, ಅದು ಪ್ರಜೆಗಳ ಅಭ್ಯುದಯವನ್ನು ಸಾಧಿಸಲು ಸಮರ್ಥವಾಗುತ್ತದೆ. ಸರ್ವೋದಯ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯಾಗಿದೆ. ರಾಜ್ಯ ವ್ಯವಸ್ಥೆಗೆ ಬದಲಿ ವ್ಯವಸ್ಥೆಯಾಗಿ ಅದು ಸ್ವಾವಲಂಬಿ ಸ್ವಾಯತ್ತ ಗ್ರಾಮ ಘಟಕಗಳ ಗ್ರಾಮ ಸ್ವರಾಜ್ಯವನ್ನು ಪ್ರತಿಪಾದಿಸುತ್ತಿದೆ. ಮಹಾತ್ಮ ಗಾಂಧೀಜಿ ಅವರ ರಾಮರಾಜ್ಯ ಅಥವಾ ಸರ್ವೋದಯದ ಕಲ್ಪನೆಗೆ ಗ್ರಾಮರಾಜ್ಯವೇ ಭದ್ರಬುನಾದಿಯೇ ಆಗಿರುತ್ತದೆ.

ಪ್ರತಿಯೊಂದು ಗ್ರಾಮದ ಆಡಳಿತವು ಚುನಾಯಿತ ಪಂಚಾಯಿತಿಯ ಮೂಲಕವೇ ನಡೆಯಬೇಕು. ಗ್ರಾಮದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಗ್ರಾಮದ ನ್ಯಾಯಪಂಚಾಯಿತಿಯೇ ತೀರ್ಪುಕೊಡಬೇಕು. ಗ್ರಾಮ ಪಂಚಾಯಿತಿಗಳಿಗೆ ತಮ್ಮತಮ್ಮ ವ್ಯವಹಾರಗಳನ್ನು ನೋಡಿಕೊಳ್ಳಲು ಹೆಚ್ಚು ಹೆಚ್ಚು ಅಧಿಕಾರಿಗಳನ್ನು ಕೊಡಬೇಕು. ಕೇಂದ್ರ ಸರ್ಕಾರ ಗ್ರಾಮಾಡಳಿತದಲ್ಲಿ ಪ್ರವೇಶಿಸಬಾರದು. ಕೇಂದ್ರದಲ್ಲಿ ಕೇವಲ ಕೆಲವು ಮಂದಿ ಪ್ರಜಾರಾಜ್ಯವನ್ನು ಬಳಕೆಗೆ ತರುತ್ತೇವೆ ಎಂಬುದು ಅಸಾಧ್ಯವಾದ ಮಾತು. ಪ್ರತಿಯೊಂದು ಗ್ರಾಮದಜನರು ಆಡಳಿತದಲ್ಲಿ ಪಾಲ್ಗೊಂಡಾಗ ಮಾತ್ರ ನಿಜವಾದ ಪ್ರಜಾವ್ಯವಸ್ಥೆಯು ಸಾಧ್ಯವಾಗುತ್ತದೆ. ಅಹಿಂಸೆಯ ಆಧಾರದ ಮೇಲೆ ರಚಿತವಾದ ಸ್ವರಾಜ್ಯ ಸ್ಥಾಪನೆಯಾಗಬೇಕಾದರೆ ಮಾನವನ ಜೀವನದ ಮೂಲಭೂತ ಅವಶ್ಯಕತೆಗಳಾದ ಅನ್ನ, ಬಟ್ಟೆ, ವಸತಿಗಳನ್ನು ಹೊಂದಿರಬೇಕು. ಭಾರತ ದೇಶದ ಗ್ರಾಮ ಸ್ವರಾಜ್ಯದ ಸಮುದಾಯ ಘಟಕಗಳ ಸಂಯುಕ್ತವಾಗಿರಬೇಕೆಂದು ಗಾಂಧೀಜಿ ಅವರು ಬಯಸಿದ್ದರು. ವಿಕೇಂದ್ರೀಕರಣವು ಗಣರಾಜ್ಯ ಮತ್ತು ಗ್ರಾಮ ಸ್ವರಾಜ್ಯಗಳೇ ಗಾಂಧೀಜಿ ಅವರ ರಾಜಕೀಯ ಸಿದ್ಧಾಂತದ ಬೆನ್ನೆಲುಬಾಗಿವೆ. ಪ್ರತಿಯೊಂದು

ರಾಷ್ಟ್ರವೂ ಸ್ವಾಯತ್ತ ರಾಷ್ಟ್ರವಾದಾಗ ವಿಶ್ವಶಾಂತಿ ತಾನೇತಾನಾಗಿ ನೆಲೆಸುವುದು ಎಂದು ಮಹಾತ್ಮ ಗಾಂಧೀಜಿ ಅವರು ಸಾರುತ್ತಾರೆ.

"ಸಮಾಜದ ಆಡಳಿತ ಧಾರ್ಮಿಕವಾಗಿರಬೇಕು. ಧರ್ಮದದಾರಿಯಲ್ಲಿ ನಡೆಯಬೇಕು, ನೈತಿಕ ಮೌಲ್ಯಗಳೇ ಸಮಾಜದ ಅಸ್ತಿಭಾರ"[3]. ಸರ್ವೋದಯ ಸಮಾಜದ ಸಪ್ತ ಸಾಮಾಜಿಕ ಪಾಪಗಳಿಂದ ಮುಕ್ತವಾಗಿರಬೇಕು. ಅವುಗಳೆಂದರೆ;

1. ತತ್ವರಹಿತ ರಾಜಕೀಯ
2. ದುಡಿಮೆ ಇಲ್ಲದ ಸಂಪತ್ತು
3. ನೀತಿಹೀನ ವಾಣಿಜ್ಯ
4. ಶೀಲವಿಲ್ಲದ ಶಿಕ್ಷಣ
5. ಆತ್ಮಸಾಕ್ಷಿ ರಹಿತ ಭೋಗ
6. ಮಾನವತಾ ಶೂನ್ಯ ವಿಜ್ಞಾನ
7. ತ್ಯಾಗವಿಲ್ಲದ ಪೂಜೆ, ಇವೇ 7 ಸಾಮಾಜಿಕ ಪಾತಕಗಳು.

2. **ಸರ್ವೋದಯದ ಆರ್ಥಿಕ ಸಿದ್ಧಾಂತ**

ಗಾಂಧೀಜಿ ಅವರು ತಾವು ನಿರ್ಮಿಸಬೇಕೆಂದಿದ್ದ ಸರ್ವೋದಯ ಸಮಾಜದಲ್ಲಿ ಆರ್ಥಿಕ ವ್ಯವಸ್ಥೆ ಮಾನವನ ಸರ್ವತೋಮುಖದ ಅಭಿವೃದ್ಧಿಯನ್ನು ಸಾಧಿಸುವುದೇ ಆಗಿದೆ. ಪ್ರತಿಯೊಬ್ಬ ವ್ಯಕ್ತಿಯು ಭೌತಿಕ ಪ್ರಗತಿಯನ್ನೇ ಮುಖ್ಯಗುರಿಯನ್ನಾಗಿ ಇಟ್ಟುಕೊಳ್ಳುವುದೇ ಅಲ್ಲದೆ ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸಬೇಕು. ಇದರಿಂದ ನಿಜವಾದ ಸಂತೋಷದ ಅರಿವು ಉಂಟಾಗುತ್ತದೆ ಎನ್ನುತ್ತಾರೆ. ಗಾಂಧೀಜಿ ಅವರು ಆರ್ಥಿಕತೆಯ ಅಂಶಗಳನ್ನು ಈ ಕೆಳಗಿನ ಸಾರಾಂಶ ರೂಪದಲ್ಲಿ ವಿವರಿಸಿದ್ದಾರೆ. ಅವುಗಳೆಂದರೆ;

1. ಭಾರೀ ಕೈಗಾರಿಕೋದ್ಯಮವನ್ನು ಆಧಾರವಾಗುಳ್ಳ ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಅತೃಪ್ತಿ ವಿರೋಧ.
2. ಸಂಕೀರ್ಣ ಪಾಶ್ಚಾತ್ಯಯಂತ್ಯ ನಾಗರೀಕತೆಗಿಂತ ಸರಳವಾದ ಭಾರತೀಯ ಜನಜೀವನವೇ ಶ್ರೇಷ್ಠ.

ಬಂಡವಾಳಶಾಹೀ ಆರ್ಥಿಕ ವ್ಯವಸ್ಥೆಯಲ್ಲಿ ಬಡವ ಹೆಚ್ಚು ಹೆಚ್ಚು ಬಡವನಾಗುತ್ತಾನೆ. ಶ್ರೀಮಂತ ಹೆಚ್ಚು ಹೆಚ್ಚು ಶ್ರೀಮಂತನಾಗುತ್ತಾನೆ. ಏಕೆಂದರೆ, ಬಡವನಾದ ಕಾರ್ಮಿಕ ಬಂಡವಾಳಶಾಹಿ ಸ್ಥಾಪಿಸಿರುವ ಕೈಗಾರಿಕೆಗಳಲ್ಲಿ ಕಡಿಮೆ ಸಂಬಳಕ್ಕೆ ದುಡಿಯುತ್ತಾನೆ. ಕಾರ್ಮಿಕ ಉತ್ಪಾದಿಸುವ ವಸ್ತುವಿನ ಬೆಲೆಯನ್ನು ದಿಗಂತಕ್ಕೇರಿಸಿ ಅತ್ಯಧಿಕ ಲಾಭವನ್ನು ಪಡೆಯುತ್ತಾನೆ. ಕಾರ್ಮಿಕ ಬಂಡವಾಳಶಾಹಿಯ ಶೋಷಣೆಗೆ ಮತ್ತು ಗುಲಾಮಗಿರಿಗೆ ಬಲಿಯಾಗುತ್ತಾನೆ. ಬಂಡವಾಳಶಾಹಿ ತನ್ನ ಸ್ವಂತ ಹಿತಕ್ಕಾಗಿ ಇತರರನ್ನು ನಿಯಂತ್ರಿಸಲು ಸೈನಿಕ ಶಕ್ತಿಯನ್ನು, ಬೃಹತ್ ಸಂಸ್ಥೆಗಳನ್ನು ನಿರ್ಮಿಸುತ್ತಾನೆ. ದ್ವೇಷ, ಯುದ್ಧ ಮತ್ತು

ವಿನಾಶವೇ ಬಂಡವಾಳಶಾಹಿಯ ಗುರಿಯಾಗಿರುತ್ತದೆ. ಯಂತ್ರಗಳ ಉಪಯೋಗದಿಂದ ಕೆಲಸ ಸುಲಭವಾಗಿ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ. ಆದರೂ ಇದರಿಂದ ಆಗುವ ಉಪಯೋಗಕ್ಕಿಂತ ಅಪಾಯವೇ ಹೆಚ್ಚು.

ನೂರು ಜನರ ಕೈಯಿಂದ ಮಾಡುವ ಕೆಲಸವನ್ನು ಒಬ್ಬ ವ್ಯಕ್ತಿಯಂತ್ರದ ಸಹಾಯದಿಂದ ಮಾಡಬಲ್ಲ. ಆಗ ಹಲವು ಮಂದಿ ನಿರುದ್ಯೋಗಿಗಳಾಗಬೇಕಾಗುತ್ತದೆ. ನಿರುದ್ಯೋಗದ ಸಮಸ್ಯೆಯಿಂದ ಮಾನವ ಸೋಮಾರಿಯಾಗುತ್ತಾನೆ. ವಿರಾಮ ಕಾಲವನ್ನು ಕಳೆಯಲು ಅನಾರೋಗ್ಯವು ಅನೈತಿಕವೂ ಆದ ದುಶ್ಚಟಗಳಿಗೆ ಒಳಗಾಗಿ ಸಮಾಜವನ್ನು ಅಧೋಗತಿಗೆ ಕೊಂಡೊಯ್ಯುತ್ತಾನೆ ಎಂದು ಗಾಂಧೀಜಿ ಅವರು ಹೇಳುತ್ತಾರೆ. ವಸ್ತುಗಳ ಉತ್ಪತ್ತಿ ಹೇರಳವಾಗಿರಬೇಕು, ಅಧಿಕ ಪ್ರಮಾಣದಲ್ಲಿರಬೇಕು ನಿಜ, ಆದರೆ, ಅಂತಹ ಉತ್ಪತ್ತಿ ದೇಹ ಶ್ರಮದಿಂದ ಗೃಹ ಕೈಗಾರಿಕೆಗಳ ಕಾರ್ಮಿಕರಿಂದ ಆಗಬೇಕು, ಯಂತ್ರಗಳಿಂದಲ್ಲ ಎನ್ನುತ್ತಾರೆ.

ಆಧುನಿಕ ತಂತ್ರಜ್ಞಾನದಿಂದ ಸಸ್ಯಗಳು, ಪ್ರಾಣಿಗಳು ಹಾಗೂ ಸುತ್ತಮುತ್ತಲ ಪರಿಸರ ಕಲುಷಿತಗೊಳಿಸಿ ಮಾನವನ ಅಸ್ತಿತ್ವವನ್ನು ಅಪಾಯಕ್ಕೆ ಇಡು ಮಾಡುತ್ತದೆ ಎನ್ನುತ್ತಾರೆ. ಬಂಡವಾಳಶಾಹಿಯು ಅತ್ಯಾಧುನಿಕ ಯುದ್ಧೋಪಕರಣಗಳನ್ನು ಹೊಂದಿ ಸಾಮ್ರಾಜ್ಯದ ದಾಹವನ್ನು ಈಡೇರಿಸಿಕೊಳ್ಳಲು ನೆರೆ ದೇಶಗಳ ಮೇಲೆ ಯುದ್ಧ ಹೂಡಿ ಅತೀವ ಹಾನಿಯನ್ನು ಉಂಟುಮಾಡುತ್ತಾನೆ. ಇದು ಬಂಡವಾಳಶಾಹಿಯ ಮತ್ತೊಂದು ದುಷ್ಪರಿಣಾಮ ಎಂದು ಗಾಂಧೀಜಿ ಅವರು ಎಚ್ಚರಿಸುತ್ತಾರೆ.

ಗಾಂಧೀಜಿ ಅವರು ಗ್ರಾಮೋದ್ಯೋಗ ಕೈಗಾರಿಕೆಗಳನ್ನು, ಅವುಗಳ ಮೇಲೆ ಆಧಾರಿತ ಆರ್ಥಿಕ ಚಿಂತನೆಯನ್ನು, ಸಹಕಾರ ಸಂಘಗಳ ಸಾಮಾಜಿಕ ವ್ಯವಸ್ಥೆಯನ್ನು, ಸರಳ ಜೀವನದ ಅವಶ್ಯಕತೆಯನ್ನು ಹೇಳುತ್ತಾರೆ. ಕೈಯಿಂದ ನೂಲುವ ಯಂತ್ರಗಳನ್ನು ಅವರು ಪುನರುಜ್ಜೀವನಗೊಳಿಸಿದರು. ಕೋಟಿಕೋಟಿ ಕುಟೀರಗಳಲ್ಲಿ ದೈಹಿಕ ಶ್ರಮದಿಂದ ಗ್ರಾಹಕ ವಸ್ತುಗಳನ್ನು ಜನರು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಬೇಕು ಎಂದು ಸಾರಿದರು. ಸಣ್ಣ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ ಬೃಹತ್ ಉದ್ದಿಮೆಗಳಿಗಿಂತ ಮುಖ್ಯವೂ ವಿವೇಕವೂ ಎಂದು ಘೋಷಿಸಿದರು. ಗುಡಿ ಕೈಗಾರಿಕೆಗಳ ಸಹಾಯದಿಂದ ಸಮಾಜದ ಜನತೆಯ ದಾರಿದ್ರ್ಯವನ್ನು ತೊಡೆದು ಹಾಕಲು ಏಕೈಕ ಮಾರ್ಗ ಇದು.

ಪ್ರೀತಿ, ಶಾಂತಿ ಹಾಗೂ ಸರ್ವರ ಯೋಗಕ್ಷೇಮಗಳನ್ನು ಅವು ಸಾಧಿಸಬೇಕು. ಆಗ ಮಾತ್ರ ಪರಾವಲಂಬನೆಯನ್ನು ತೊಡೆದು ಹಾಕಿ ಸ್ವಾವಲಂಬನೆಯನ್ನು ಸ್ಥಾಪಿಸುವುದು ಎಂದು ಗಾಂಧೀಜಿ ಅವರು ಅಭಿಪ್ರಾಯವನ್ನು ಪಡುತ್ತಾರೆ. ಈ ಅರ್ಥದಲ್ಲಿ ಗಾಂಧೀಜಿ ಅವರು ದೇಶದಲ್ಲಿ ಭಾರೀ ಕೈಗಾರಿಕೆಗಳ ಸ್ಥಾಪನೆಯನ್ನು ವಿರೋಧಿ ಎಂದು ಅಲ್ಲ. ಏಕೆಂದರೆ, ಸಿಂಗರ್ ಹೊಲಿಗೆ ಯಂತ್ರವನ್ನು ಕಂಡುಹಿಡಿದುದನ್ನು ಸಹೃದಯದಿಂದ ಸ್ವಾಗತಿಸಿದರು. ಗೃಹಿಣಿಯ ಕಷ್ಟಕರವಾದ ಕೈ ಹೊಲಿಗೆಯ ಕೆಲಸವನ್ನು ಸಿಂಗರ್ ಸುಲಭ ಮಾಡಿದ ಎಂದು ಕೊಂಡಾಡುತ್ತಾರೆ. ಯಂತ್ರೀಕರಣದ ಬಗ್ಗೆ ಅವರ

ಮಾತುಗಳಲ್ಲೆ ಉದ್ಧರಿಸುವುದಾದರೆ, "ಯಂತ್ರವನ್ನಲ್ಲ ನಾನು ಬೇಡ ಎನ್ನುವುದು; ಯಂತ್ರಯಂತ್ರ ಭ್ರಾಂತಿಯನ್ನು."[4] ಗಾಂಧೀಜಿ ಅವರು ತಮ್ಮ ಮಾತುಗಳನ್ನು ಮುಂದುವರಿಸುತ್ತಾ ಹೀಗೆ ಹೇಳುತ್ತಾರೆ. "ಯಂತ್ರವೆಂಬುದೇ ಹಾಳಾಗಲಿ ಎಂಬುದಲ್ಲ ನನ್ನಗುರಿ. ಅದಕ್ಕೊಂದು ಪರಿಮಿತಿ ಇರಲಿ ಎಂಬುದು"[5] "ಹಳ್ಳಿಗರೇ ಯಾವ ಕಷ್ಟವೂ ಇಲ್ಲದೆ ಉತ್ಪಾದಿಸಬಹುದಾದ ವಸ್ತುಗಳನ್ನು ಭಾರಿ ಪ್ರಮಾಣದಲ್ಲಿ ಯಂತ್ರಗಳಿಂದ ಉತ್ಪತ್ತಿ ಮಾಡುವುದಕ್ಕೆ ವಿರುದ್ಧವಾಗಿದ್ದೇನೆ."[6]

**ಧರ್ಮದರ್ಶಿತ್ವ ಸಿದ್ಧಾಂತ:** ಬಂಡವಾಳಶಾಹಿ ಅರ್ಥವ್ಯವಸ್ಥೆಗೆ ಬದಲಾಗಿ ಗಾಂಧೀಜಿ ಅವರು ತಮ್ಮದೇ ಆದ ಸಿದ್ಧಾಂತವನ್ನು ಮಂಡಿಸುತ್ತಾರೆ. ಅದೇ ಧರ್ಮದರ್ಶಿತ್ವ ಸಿದ್ಧಾಂತ. ಶ್ರೀಮಂತರು ತಾವು ಹೊಂದಿರುವ ಸಂಪತ್ತನ್ನು ಬಡವರಿಗೆ ಹಂಚಲು ತಾವಾಗಿಯೇ ಮುಂದೆ ಬರಬೇಕು. ಅವರು ಬಡವರ ಶ್ರಮದಿಂದಲೇ ಶ್ರೀಮಂತರಾಗಿದ್ದಾರೆಂಬುದನ್ನು ಮರೆಯಬಾರದು. ಸಕಲ ಜೀವಿಗಳಿಗೆ ಲೇಸನೆ ಬಯಸುವ ಗಳಿಕೆಯನ್ನು ಎಲ್ಲರೊಡನೆ ಹಂಚಿಕೊಂಡು ಊಟ ಮಾಡುವ ಮಾನವೀಯ ದೃಷ್ಟಿ ಗಾಂಧೀಜಿ ಅವರ ಧರ್ಮದರ್ಶಿತ್ವ ಸಿದ್ಧಾಂತದ ಕಲ್ಪನೆಯಾಗಿದೆ. ಬಂಡವಾಳಶಾಹಿ ಸಮಾಜ ವ್ಯವಸ್ಥೆಯನ್ನು ಸಾಮ್ಯತೆಯ ನಿಷ್ಠೆ ಸಮಾಜವನ್ನಾಗಿ ಪರಿವರ್ತಿಸುವ ಬಹಳ ಸರಳವೂ ಪವಿತ್ರವೂ ಆದ ಮಾರ್ಗವೇ ಧರ್ಮದರ್ಶಿತ್ವ ಸಿದ್ಧಾಂತವೆಂದು ಗಾಂಧೀಜಿ ಅವರು ನಂಬಿದ್ದರು. ಮಾನವ ಹಿತವೇ ಆರ್ಥಿಕ ಚಿಂತನೆಯ ಅಗ್ನಿ ಪರೀಕ್ಷೆಯೆಂದು ಗಾಂಧೀಜಿ ಅವರು ಸಾರುತ್ತಾರೆ. ಧರ್ಮದರ್ಶಿತ್ವ ಸರ್ವೋದಯದ ಅರ್ಥ. ಚಿಂತನೆಯ ಮಾನವೀಯ ಮೌಲ್ಯವಾಗಿದೆ.

**ಸತ್ಯಾಗ್ರಹ:**ಆಧ್ಯಾತ್ಮಿಕತೆಯೇ ಸರ್ವೋದಯ ಸಮಾಜದ ಆಧಾರ. ಆದುದರಿಂದ ಅದನ್ನು ಪಡೆಯುವ ಮಾರ್ಗವೂ ಆಧ್ಯಾತ್ಮಿಕವಾದುದೇ ಆಗಿದೆ.ಸತ್ಯ, ಅಹಿಂಸೆ, ಪ್ರೀತಿ, ಅಭಯ, ಪ್ರಾಮಾಣಿಕತೆಗಳೇ ಸರ್ವೋದಯ ಮಾರ್ಗದ ಸಾರಸರ್ವಸ್ವ. ಸತ್ಯಾಗ್ರಹ ಸರ್ವೋದಯ ಸಮಾಜವನ್ನು ಪ್ರತಿಷ್ಠಾಪಿಸುವ ಒಂದು ಅಪೂರ್ವ ವಿಧಾನವಾಗಿದೆ. ದುಷ್ಟ ಶಕ್ತಿಯನ್ನು ಶಿಷ್ಟ ಶಕ್ತಿಯನ್ನಾಗಿ ಅದು ಸತ್ಯ, ತ್ಯಾಗ, ಪ್ರೇಮಗಳ ಮೂಲಕ ಪರಿವರ್ತಿಸುತ್ತದೆ. ಶತ್ರುತ್ವವನ್ನು ಮಿತ್ರಕ್ಕೆತಿರುಗಿಸುತ್ತದೆ. ಅಹಿಂಸೆಯೇ ಸತ್ಯಾಗ್ರಹದ ಜೀವಾಳ. ಸತ್ಯಾಗ್ರಹ ಎದುರಾಳಿಯನ್ನು ದ್ವೇಷಿಸುವುದಿಲ್ಲ. ಅವನು ದ್ವೇಷಿಸುವುದು ಎದುರಾಳಿಯ ದುಷ್ಟತನವನ್ನು. ಸತ್ಯಾಗ್ರಹವೆಂದರೆ ಅಧರ್ಮ ವಿರೋಧ ಸತ್ಯಕ್ಕಾಗಿಆಗ್ರಹ ಪಡಿಸುವುದು ಎಂದು ಅರ್ಥ. ಆತ್ಮಶಕ್ತಿಗೆ, ಪ್ರೀತಿಗೆ ಇನ್ನೊಂದು ಹೆಸರೇ ಸತ್ಯಾಗ್ರಹ. ಗಾಂಧೀಜಿ ಅವರ ಸಮಷ್ಠಿ ದೃಷ್ಟಿಯಲ್ಲಿ ಸತ್ಯಾಗ್ರಹ ಎಲ್ಲ ಸಮಸ್ಯೆಗಳಿಗೆ ದಿವ್ಯ ಔಷಧಿಯಾಗಿದೆ ಎನ್ನುತ್ತಾರೆ.

## 3. ಸರ್ವೋದಯ ಮತ್ತು ಸಮತಾವಾದ:

ಸರ್ವೋದಯ ಹಾಗೂ ಸಮತಾವಾದಗಳ ಗುರಿ ಒಂದೇ ಆದರೂ ಇವೆರಡೂ ಆ ಗುರಿಯನ್ನು ಸಾಧಿಸಲು ಅನುಸರಿಸುವ ಬೇರೆ ಬೇರೆ ಮಾರ್ಗಗಳಿವೆ. ಸರ್ವೋದಯದಲ್ಲಿ ಮುಖ್ಯವಾದದ್ದು ಅಧಿಕಾರದ ವಿಕೇಂದ್ರೀಕರಣ. ಸಮತಾವಾದದಲ್ಲಿ ಮುಖ್ಯವಾದದ್ದು ಕೇಂದ್ರೀಕರಣ. ಸಮತಾವಾದಿಗಳು ಅನುಸರಿಸುವ

ಮಾರ್ಗ, ಬಲಪ್ರಯೋಗ, ಘರ್ಷಣೆ ಮತ್ತು ರಕ್ತಪಾತ. ಆದರೆ ಸರ್ವೋದಯ ಆಧ್ಯಾತ್ತಿಕ ಅಡಿಪಾಯವನ್ನು ಹೊಂದಿ ಹಿಂಸೆ ಹಾಗೂ ಸತ್ಯ ಮಾರ್ಗಗಳನ್ನು ಅನುಸರಿಸುವುದರ ಮೂಲಕ ತನ್ನಗುರಿಯನ್ನು ಸಾಧಿಸಲು ಪ್ರಯತ್ನಿಸುತ್ತದೆ. ಸಮತಾವಾದದಲ್ಲಿ ಗುರಿ ಬಹುಮುಖ್ಯವಾದ ಅಂಶವೇ ಆಗಿರುತ್ತದೆ ಎಂದು ಹೇಳಬಹುದು. ಸರ್ವೋದಯದಲ್ಲಿ ಗುರಿಯಷ್ಟೇ ಸಾಧನ ಮಾರ್ಗವೂ ಮುಖ್ಯ. ಸಮತಾವಾದವು ಸಮಾಜದ ಭೌತಿಕ ಪ್ರಗತಿಯನ್ನು ಬಯಸುತ್ತದೆ. ಸರ್ವೋದಯ ಸಮಾಜವು ನೈತಿಕ ಹಾಗೂ ಆಧ್ಯಾತ್ಮಿಕ ಪ್ರಗತಿಯನ್ನು ಬಯಸುತ್ತದೆ.

**4. ಸರ್ವೋದಯ ಮತ್ತು ಭೂದಾನ:**

ಸರ್ವೋದಯ ಸಮಾಜವನ್ನು ಸ್ಥಾಪಿಸುವ ದಿಸೆಯಲ್ಲಿ ಶ್ರೀವಿನೋಬಾರಿಂದ ಮೊದಲುಗೊಂಡ ಭೂದಾನ ಚಳುವಳಿಯನ್ನು ಇಲ್ಲಿ ತಪ್ಪದೆ ಹೆಸರಿಸಬೇಕು. ಭೂದಾನವೆಂದರೆ; ಭೂಮಿಯುಳ್ಳವರು ಇಲ್ಲದವರಿಗೆ ನ್ಯಾಯ ಭಾಗವನ್ನು ಕೊಡುವುದಾಗಿದೆ. ಭೂದಾನ ಸಂಪತ್ತಿನ ದಾನ. ಜ್ಞಾನದಾನ, ಗ್ರಾಮದಾನ, ಗ್ರಾಮದಾನಗಳಾಗಿ ಬೆಳೆದು ಸರ್ವೋದಯ ಸಮಾಜದ ರಚನೆಗೆ ಪೂರಕವಾಗಿ ನಿಂತಿತ್ತು.ಆ ಪರಂಪರೆಯನ್ನು ಇತ್ತೀಚಿನ ದಿನಗಳಲ್ಲಿ ಸಂಪೂರ್ಣಕ್ರಾಂತಿ ಎಂಬ ಹೆಸರಿನಲ್ಲಿ ಶ್ರೀ ಜಯಪ್ರಕಾಶ್ ನಾರಾಯಣ ಅವರು ಮುಂದುವರಿಸಿದರು.

ಹೀಗೆ, ಮಹಾತ್ಮ ಗಾಂಧೀಜಿ ಅವರ ಚಿಂತನೆಯಲ್ಲಿ ಸರ್ವೋದಯದ ಸಿದ್ಧಾಂತವು ಹಲವು ಹತ್ತು ವಿಚಾರಗಳನ್ನು ತಳಸ್ಪರ್ಶಿಯಾಗಿ ಹೋಮದಿರುತ್ತದೆ. ಆದರೆ, ಇಂದಿನ ವ್ಯವಸ್ಥೆಯನ್ನು ಇದನ್ನು ಅನುಸರಿಸುವಂಥ ಕಾರ್ಯದಿಂದಲೇ ಹಿಮ್ಮುಖವಾಗಿಯೇ ಚಲಿಸುತ್ತದೆ ಎಂಬುದನ್ನು ಗುರುತಿಸಬಹುದು. ಗಾಂಧೀಜಿ ಅವರು ಬಯಸಿದ ಸರ್ವೋದಯವನ್ನು ಅನುಷ್ಠಾನಕ್ಕೆ ತರಲು ಕಾಳಜಿಯನ್ನು ವಹಿಸಬೇಕು. ಸರ್ಕಾರದ ಮಹತ್ವದ ಯೋಜನೆಗಳಲ್ಲಿ ಒಂದಾಗಿವ ಸ್ವಚ್ಛ ಭಾರತ ಅಭಿಯಾನ. ಇದು ಗಾಂಧೀಜಿ ಅವರು ಪರಿಕಲ್ಪನೆಯಾಗಿರುತ್ತದೆ. ಆದರೆ, ಗಾಂಧೀಜಿ ಅವರು ಎಲ್ಲರೊಟ್ಟಿಗೆ ಕೈಗೊಂಡಿದ್ದ ಈ ಕಾರ್ಯವು ಇಂದು ಕೆಲವೇ ಕೆಲವು ಅಸ್ಪೃಶ್ಯ ಜನವರ್ಗವೂ ಈ ಕಾರ್ಯವನ್ನು ಮಾಡಲಾಗುತ್ತದೆ. ಆದರೆ, ಈ ಅಭಿಯಾನದ ಉದ್ಘಾಟನೆಯ ಸಂದರ್ಭದಲ್ಲಿ ಪ್ರತಿಯೊಬ್ಬರು ಕೂಡ ಸ್ವಚ್ಛ ಮಾಡುವ ಭಂಗಿಗಳಲ್ಲಿ ಛಾಯಾಚಿತ್ರಗಳನ್ನು ತೆಗೆಸಿಕೊಂಡು ಇಂದು ಸಾಮಾಜಿಕ ಜಾಲತಾಣಗಳಿಗೆ ಹರಿಬಿಟ್ಟಿ ಹೆಸರನ್ನು ಮತ್ತು ಜನಮನ್ನಣೆಯನ್ನು ಪಡೆದುಕೊಂಡು ಅಧಿಕಾರದ ಗದ್ದುಗೆಯನ್ನು ಮತ್ತೇ ಮತ್ತೇ ಏರಲು ಪ್ರಯತ್ನಿಸುವ ಸನ್ನಿವೇಶಗಳನ್ನು ಗುರುತಿಸಬಹುದು. ಸರ್ವೋದಯವೂ ಎಲ್ಲರೂ ಮತ್ತು ಯಾರು ದಮನಕ್ಕೆ ಹಾಗೂ ವ್ಯವಸ್ಥೆಯಿಂದಲೇ ಹೊರಗುಳಿದ್ದಾರೆ ಅವರನ್ನು ಮತ್ತೇ ವ್ಯವಸ್ಥೆಯಲ್ಲಿ ಒಳಗೊಂಡು ಎಲ್ಲರಂತೆಯೇ ಬದುಕನ್ನು ಕಟ್ಟಿಕೊಳ್ಳುವುದೇ ಆಗಿರುತ್ತದೆ.

**ಅಡಿ ಟಿಪ್ಪಣಿಗಳು**

1. ಪ್ರೊ. ವಿ.ಎನ್. ಶೇಷಗಿರಿರಾವ್, ***ಸಮಕಾಲೀನ ಭಾರತೀಯ ತತ್ತ್ವಶಾಸ್ತ್ರ***, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-1985, ಪುಟ-169)
2. ಅದೇ, ಪುಟ-167
3. ಅದೇ, ಪುಟ-171
4. ಮೋ.ಕ.ಗಾಂಧೀ, ಅರ್ಥ ವಿಚಾರ, ಗಾಂಧೀ ಸ್ಮಾರಕ, ಕರ್ನಾಟಕ ಶಾಖೆ, ಬೆಂಗಳೂರು – 1959, ಪುಟ-199
5. ಅದೇ, ಪುಟ-200
6. ಅದೇ, ಪುಟ-202